



# ಹಸಿರು ಪಟಾಕಿಯಲ್ಲೂ ಹೊಗೆಯಿದೆ, ಜೋಕೆ!

**ದೊಡ್ಡ ಹಬ್ಬ ದೀಪಾವಳಿ ಮೂರು ದಿನದ ಸಂಭ್ರಮವಾದರೂ ಕಾರ್ತೀಕ ಮಾಸ ಪೂರ್ತಿಯಾಗಿ, ಉತ್ಥಾನ ದ್ವಾದಶಿವರೆಗೂ (ತುಳಸಿ ಹಬ್ಬ) ತನ್ನ ಪ್ರಭಾವಳಿ ಬೀರುತ್ತಲೇ ಇರುತ್ತದೆ. ಈ ಸಮಯದಲ್ಲಿ ನಿತ್ಯವೂ ಮನೆ ಮುಂದೆ ಹಣತೆಗಳ ಸಾಲು ಬೆಳಗುತ್ತದೆ, ಪಟಾಕಿಗಳ ಸದ್ದು ಮೊಳಗುತ್ತದೆ. ಮಕ್ಕಳಿಗೆ ಪ್ರಿಯವಾದ ಪಟಾಕಿಗಳನ್ನು ಹಚ್ಚುವಾಗ ಹುಷಾರು, ಹಸಿರು ಪಟಾಕಿಯಲ್ಲೂ ರಾಸಾಯನಿಕವಿದೆ!**

■ ಕೆರೆ ಮಂಜುನಾಥ

ಪಟಾಕಿ ಎಂದರೆ ಯಾರಿಗೆ ಇಷ್ಟ ಇಲ್ಲ. ಚಿಕ್ಕ ಮಕ್ಕಳು ಶಬ್ದಕ್ಕೆ ಅಂಜಿದರೂ, ಬೆಳಕು ಬೀರುವ ಪಟಾಕಿಗಳತ್ತ ಮಂದಹಾಸ ಬೀರುತ್ತಾರೆ. ಸ್ವಲ್ಪ ಬೆಳೆದ ಮೇಲೆ ಮಕ್ಕಳು ಢಂ ಢಂ ಎನ್ನುವ ಪಟಾಕಿಗಳನ್ನೇ ಆರಿಸಿಕೊಳ್ಳುತ್ತಾರೆ. ಇನ್ನಷ್ಟು ಬೆಳೆದು ಯುವಕರಾದಾಗ ಸರಸರ ಸಿಡಿಯುವ ಸರಣಿ ಶಬ್ದವೇ ಬೇಕು. ಶಬ್ದದ ಜೊತೆಗೆ ಆಕಾಶದಲ್ಲಿ ಬೆಳಕಿನ ಚಿತ್ರ ಬಿಡಿಸುವ ಬಾಣಬಿರುಸುಗಳು ಎಲ್ಲರ ನೋಟಗಳನ್ನು ತನ್ನತ್ತ ಸೆಳೆದು, ಸಂಭ್ರಮ ಕಣ್ಣು ತುಂಬುತ್ತದೆ. ಇಂತಹ ಪಟಾಕಿಗಳನ್ನು ಹಚ್ಚುವ ಮೊದಲು ನಮ್ಮ ಉಸಿರಾಟದ ಬಗ್ಗೆಯೂ ಕಾಳಜಿ ಇರಬೇಕಲ್ಲವೇ? ಪಟಾಕಿ ಯಾರದ್ದಾದರೇನು, ಹಚ್ಚೋರು ಮಾತ್ರ ನಾವಾಗಿರಬೇಕು... ಎಂಬ ಮಾತಿದೆ. ಆದರೆ ಆ ಪಟಾಕಿ ಮಾತ್ರ 'ಹಸಿರು ಪಟಾಕಿ'ಯೇ ಆಗಿರಬೇಕು ಎಂಬುದನ್ನೂ ಇದೀಗ ಸೇರಿಸಿಕೊಳ್ಳಬೇಕಾಗಿದೆ.

ಮೋಜು, ನಲಿವು– ಸಂಭ್ರಮವನ್ನು ನೀಡುವುದಕ್ಕಿಂತ ಹತ್ತಾರುಪಟ್ಟು ಹೆಚ್ಚು ಆರೋಗ್ಯಕ್ಕೆ ಹಾನಿ ಮಾಡುವ ಪಟಾಕಿ, ವಾಯುಮಾಲಿನ್ಯದ ಜೊತೆಗೆ ರಾಸಾಯನಿಕಗಳನ್ನು ವಾತಾವರಣಕ್ಕೆ ಬಿಟ್ಟು ಪರಿಸರವನ್ನು ಹಾಳು ಮಾಡಿ ಮನುಷ್ಯರ ಉಸಿರುಗಟ್ಟಿಸುತ್ತದೆ. ಮಾನವನ ಆರೋಗ್ಯ, ಗಾಳಿ–ಹಸಿರಿನ ಮೇಲೆ ದುಷ್ಪರಿಣಾಮ ಬೀರುವ ಬ್ಲ್ಯಾಕ್ ಪೌಡರ್, ನೈಟ್ರೇಟ್, ಕ್ಲೋರೇಡ್ಸ್, ಸಲ್ಫರ್, ಚಾರ್‌ಕೋಲ್, ಲೋಹ, ಸ್ಟ್ರೋಂಟಿಯಂ, ಕಾಪರ್, ಬೇರಿಯಂ, ಸೋಡಿಯಂ, ಕ್ಯಾಲ್ಸಿಯಂ, ಐರನ್, ಡೆಕ್ಸ್ಟ್ರಿನ್‌ನಂತಹ ದಹನಕಾರಿ ವಸ್ತುಗಳಿಂದ ಸಾಂಪ್ರದಾಯಿಕ ಪಟಾಕಿಗಳು ತಯಾರಾಗುತ್ತವೆ. ಇಂತಹ ಪಟಾಕಿಗಳು ಅಥವಾ ಸುಡುಮದ್ದು ಸ್ಫೋಟದಿಂದ ವಾಯುಮಾಲಿನ್ಯ ಗರಿಷ್ಠ ಮಟ್ಟಕ್ಕೆ ತಲುಪುತ್ತದೆ. ಅದರಲ್ಲೂ ಬೆಳಕಿನ ಹಬ್ಬ ದೀಪಾವಳಿಯ ಸಂದರ್ಭದ ದಿನಗಳಲ್ಲಿ ರಾಜ್ಯ ಹಾಗೂ ದೇಶದಲ್ಲಿ ವಾಯುಮಾಲಿನ್ಯ ಅತ್ಯಂತ ಉಚ್ಚಮಟ್ಟಕ್ಕೆ ತಲುಪುತ್ತದೆ.

ಮಕ್ಕಳು, ವೃದ್ಧರು ಹಾಗೂ ಅನಾರೋಗ್ಯಪೀಡಿತರಿಗೆ ಪಟಾಕಿ ಎಂಬುದು ವಿಷಕಾರಕ. ಉಸಿರಾಡುವ ಗಾಳಿಯಲ್ಲೇ ವಿಲೀನಗೊಂಡು, ಜೀವವಾಯುವಿನಲ್ಲಿ ಶರೀರ ಸೇರುವ ಸುಡುಮದ್ದಿನ ಮಾಲಿನ್ಯ ಪ್ರಾಣಕ್ಕೆ ಸಂಚಕಾರ ತರುತ್ತದೆ. ಚುಮುಚುಮು ಚಳಿಯ ಸಂದರ್ಭದಲ್ಲೇ ದೀಪಾವಳಿ ಆಚರಣೆಯಾಗುವ